ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**185**
ಸದಸ್ಯರ ಹೆಸರು	**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಉತ್ತರಿಸಬೇಕಾದ ದಿನಾಂಕ	**01.02.2021**
ಉತ್ತರಿಸುವ ಸಚಿವರು	**ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ)**
ಪ್ರಶ್ನೆ	**ಉತ್ತರ**
ಅ) ಸರ್ಕಾರದಿಂದ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಎಷ್ಟು ಸ್ಟಾರ್ಟ್ ಅಪ್ ಸಂಸ್ಥೆಗಳಿಗೆ ಸಹಾಯಧನ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಲಾಗಿದೆ; (ವಿವರ ನೀಡುವುದು) ಆ) ಇಲ್ಲಿಯವರೆಗೆ ಕರ್ನಾಟಕ ರಾಜ್ಯ ನಿವಾಸಿಗಳ ಎಷ್ಟು ಸ್ಟಾರ್ಟ್ ಅಪ್ ಸಂಸ್ಥೆಗಳಿಗೆ ಸಹಾಯಧನ ನೀಡಲಾಗಿದೆ; ಇ) ಸದರಿ ಸ್ಟಾರ್ಟ್ ಅಪ್ ಸಂಸ್ಥೆಗಳಿಂದ ಸ್ಥಳೀಯರಿಗೆ ಒದಗಿಸಲಾದ ಉದ್ಯೋಗಗಳ ಸಂಖ್ಯೆ ಎಷ್ಟು; ಎಲಿಮೇಟೆಡ್ 100 ಯೋಜನೆಯಡಿ ಕಳೆದ 10 ವರ್ಷಗಳ ಅವಧಿಯಲ್ಲಿ ಸರ್ಕಾರದಿಂದ ನೀಡಿರುವ ಅನುದಾನವೆಷ್ಟು?	ಕರ್ನಾಟಕ ಸ್ಟಾರ್ಟ್‌ಅಪ್ ನೀತಿಯನ್ನು 2015 ವರ್ಷದ ಕೊನೆಯಲ್ಲಿ ಜಾರಿಗೆ ತರಲಾಗಿದೆ. ಈ ನೀತಿಯಡಿಯಲ್ಲಿ, ಐಡಿಯಾ2ಪಿಓಸಿ ಕಾರ್ಯಕ್ರಮದಡಿ, ಎಲಿವೇಟ್-100, ಎಲಿವೇಟ್-ಉನ್ನತಿ ಹಾಗೂ ಅಂತಹ ಇನ್ನಿತರ ಕಾರ್ಯಕ್ರಮಗಳಡಿ ಕಳೆದ 5 ವರ್ಷಗಳಲ್ಲಿ, ಒಟ್ಟು 523 ನವೋದ್ಯಮಗಳಿಗೆ ಆರ್ಥಿಕವಾಗಿ ಅಥವಾ ಇನ್ನಿತರ ರೀತಿಯಲ್ಲಿ ಬೆಂಬಲಿಸಲಾಗಿರುತ್ತದೆ. ಈ ಎಲ್ಲ ನವೋದ್ಯಮಗಳು ಕರ್ನಾಟಕದಲ್ಲಿ ನೆಲೆಯಿರುವಂಥವಾಗಿರುತ್ತವೆ. 489 ನವೋದ್ಯಮಗಳು ರೂ.116 ಕೋಟಿಗಳಷ್ಟು ಸರ್ಕಾರದ ಅನುದಾನವನ್ನು ಪಡೆದುಕೊಂಡಿದ್ದು, ಇನ್ನಿತರ 34 ನವೋದ್ಯಮಗಳು - ಪೇಟೆಂಟ್ ಗಾಗಿ ತಗಲಿದ ವೆಚ್ಚದ ಮರುಪಾವತಿ, ಮಾರುಕಟ್ಟೆಗಾಗಿ ಪ್ರೋತ್ಸಾಹಕ, ಜಿ.ಎಸ್.ಟಿ. ಹಿಂಪಾವತಿ ಮತ್ತಿತರ ಸೌಲಭ್ಯಗಳ ಪ್ರೋತ್ಸಾಹಕಗಳಾಗಿ ಅಂದಾಜು ರೂ.55.00 ಲಕ್ಷಗಳಷ್ಟು ಮೊತ್ತವನ್ನು ಪಡೆದುಕೊಂಡಿವೆ. ಸುಮಾರು 5,000 ಸ್ಥಳೀಯ ಉದ್ಯೋಗಿಗಳಿಗೆ ಸದರಿ ನವೋದ್ಯಮ ಸಂಸ್ಥೆಗಳಿಂದ ಉದ್ಯೋಗವನ್ನು ನೀಡಲಾಗಿದೆ.

(ಐಟಿಬಿಟಿ 04 ಎಲ್‌ಸಿಎಂ 2021)

(ಡಾ|| ಅಶ್ವಥ್ ನಾರಾಯಣ್ ಸಿ.ಎನ್)
ಉಪಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.